ಶ್ರೀ ಕೆ.ಆರ್. ರಮೇಶ್ ಕುಮಾರ್ : ಈಗ 1.30 ಗಂಟೆಯಾಗಿರುವುದರಿಂದ ಅಪೀಲ್ ಮಾಡಿಕೊಳ್ಳುವುದೇನೆಂದರೆ ತಾವು ಡಯಾಬಿಟಿಕ್ ಪೇಷೆಂಟ್ ಆಗಿರುವುದರಿಂದ, ವಿಶ್ವಾಸಸ್ಥರು, ಅಧ್ಯಕ್ಷ ಪೀಠದಲ್ಲಿ ತಾವು ಕೋಮಲ ಹೃದಯದಿಂದ ನಗು ನಗುತ್ತಾ ಇದ್ದರೆ ನಮಗೆ ಮಾತನಾಡುವುದಕ್ಕೆ ಚೆನ್ನಾಗಿರುತ್ತದೆ.

ಅಧ್ಯಕ್ಷರು : ಆ ರೀತಿ ತೊಂದರೆಯೇನಿಲ್ಲ, ನೀವು ಮಾತನಾಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ :Lunch time ಎಂದು ಹೇಳಿ ಎಲ್ಲವನ್ನೂ ಪ್ಯಾಕ್ ಮಾಡಿದ್ದೇನೆ. Lunchಮುಗಿಸಿದ ಮೇಲೆ ಮಾತನಾಡಬಹುದಲ್ಲವೇ?

ಅಧ್ಯಕ್ಷರು : ನಿಮ್ಮ ಮಾತನ್ನು ಕೇಳುವುದಕ್ಕೆ ಮಾನ್ಯ ಸದಸ್ಯರೆಲ್ಲರೂ ಬಹಳ ಕುತೂಹಲದಿಂದ ಇದ್ದಾರೆ. ಪ್ರಾರಂಭ ಮಾಡಿ.

6. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾಪದ ಮೇಲೆ ಚರ್ಚೆ

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಬಹಳ ಒಳ್ಳೆಯ ವಿಚಾರ discussionಆದ ಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆ. ಕೆ.ಪಿ.ಎಸ್.ಸಿ. manipulation, discretion ಇವುಗಳೆಲ್ಲಾ ಆದ ಮೇಲೆ ನನ್ನ turn ಬಂದಿದೆ. ಇದರ ಅರ್ಥವೇನೆಂದರೆ ಯಾರಿಗೆ ಯಾವಾಗ ಯಾವ ಅವಕಾಶ ಸಿಗಬೇಕೋ, ಅದು ಸಿಗದೇ ಹೋದಾಗ ಅದೇ manipulation. The process of public life ಹೀಗೆಯೇ. ಈಗ ತಾವು ಅಲ್ಲಿ ಕುಳಿತಿದ್ದೀರಿ. ಅದು manipulationಅಲ್ಲವೇ?

ಅಧ್ಯಕ್ಷರು : ಇಲ್ಲ. ಹಾಗೆಲ್ಲಾ ಹೇಳಬಾರದು.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : I am glad. ಆ ಚೇರ್ ಅನ್ನು ನಾವು ಹಾಗೆಲ್ಲ derogate ಮಾಡುವುದಕ್ಕೆ ಬರುವುದಿಲ್ಲ. ಅಧ್ಯಕ್ಷರೆ, ಮಾನ್ಯ ರಾಜ್ಯ ಪಾಲರ ಭಾಷಣಕ್ಕೆ ವಂದನೆ ಸೂಚಿಸುವಂತಹ ನಿರ್ಣಯವನ್ನು ಸದನದಲ್ಲಿ ಮಂಡಿಸುವಂತಹದು ನಮಗೆ House of Commonsನಿಂದ ಬಂದಿದು. Mr.Fredrick Whiteಎನ್ನುವವರು ಬಹಳ efficient parliamentary secretary ಆಗಿದ್ದವರು. ಅವರು ನಮ್ಮ

Legislative Council ಗೆ first vice president ಆಗಿದ್ದರು. 1921ನಲ್ಲಿ ಮೊದಲ ಬಾರಿಗೆ Queen's addressಮಾಡಿದ್ದರೆ, ಅಲ್ಲಿ ಏನು ಭಾಷಣ ಮಾಡುತ್ತಿದ್ದರೋ ಅದರ ಪ್ರತಿಯನ್ನು ಇಲ್ಲಿಗೆ ಕಳುಹಿಸಿಕೊಡುತ್ತಿದ್ದರು. ಮಧ್ಯೆ ಮೂರು ಬಾರಿ 1947–1950 ರವರೆಗೆ ನಿಂತು ಹೋಯಿತು. 1950 ರಲ್ಲಿ Constituent Assembly ಬಂದ ನಂತರ ಒಂದೇ ವರ್ಷದಲ್ಲಿ President's address ಇತ್ತು. ಅಲ್ಲಿಂದಾಚೇಗೆ ಸಂವಿಧಾನವನ್ನು ತಿದ್ದುಪಡಿ ಮಾಡಿ, ಹೊಸ ವಿಧಾನಸಭೆ ಹಾಗೂ ಲೋಕಸಭೆ ಆಯ್ಕೆಯಾದಾಗ ತನ್ನ ಎಲ್ಲಾ ಕಾರ್ಯಚಟುವಟಿಕೆಗಳನ್ನು ವಿದ್ಯುಕ್ತವಾಗಿ ಪ್ರಾರಂಭ ಮಾಡುವುದಕ್ಕೆ ರಾಜ್ಯಪಾಲರು ಬಂದು ಭಾಷಣ ಮಾಡಿ ಹೋಗುತ್ತಾರೆ. ಅವರು ರಾಜ್ಯದಲ್ಲಿ ಸಂವಿಧಾನದ ಪ್ರತಿನಿಧಿ. ನಮ್ಮದು ಗಣರಾಜ್ಯ, ಒಕ್ಕೂಟ. ಸಂವಿಧಾನದ ಪ್ರತಿನಿಧಿಯಾಗಿ ಗೌರವಾನ್ವಿತ ರಾಷ್ಟ್ರಪತಿಗಳ ಪರವಾಗಿ ಇಲ್ಲಿ ಹಾಜರಿದ್ದು, ನಮ್ಮ ಚಟುವಟಿಕೆಗಳ ಮೇಲೆ ನಿಗಾ ಇಡುವಂತಹವರಾಗಿ, ನಮಗೆ ಶುಭ ಹಾರೈಸಿ ಹೋಗುತ್ತಾರೆ. ಅವರಿಗೆ ನಾವು ಕೃತಜ್ಞತೆಯನ್ನು ಸಲ್ಲಿಸುವುದು ಗೌರವ. ಅವರು ನಮಗೆ ಏನು ಹೇಳಬೇಕು? ರಾಜ್ಯ ಸರ್ಕಾರ ಅನೇಕ ಪ್ರಮುಖ ವಿಚಾರಗಳಿಗೆ ಸಂಬಂಧಿಸಿದಂತೆ ತನ್ನ ನೀತಿ ಏನು ಇರುತ್ತದೆ ಆ ನೀತಿಯನ್ನು ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಮಾಡಿ, ಡ್ರ್ಯಾಫ್ಟ್ ಮಾಡಿ Governor's address ಎಂದು prepare ಮಾಡುತ್ತದೆ. Article 176ರಲ್ಲಿ Governorಅದವರಿಗೆ ಬಹಳ ಸೀಮಿತ ಅವಕಾಶ. He shall deliver his responsibility ಅವರಿಗೆ ಅನ್ಯ ಮಾರ್ಗವಿಲ್ಲ. ಬರಲೇಬೇಕು. ಅವರೇ ಓದುವ ಆಗಿಲ್ಲ. ಇವರು ಮಾಡಿಕೊಟ್ಟಿದ್ದನ್ನೇ ಅವರು ಓದಬೇಕು. ಮಾನ್ಯ ಜಗದೀಶ್ ಶೆಟ್ಟರ್‌ರವರು ಈ ವಿಷಯವನ್ನು ಪ್ರಸ್ತಾಪ ಮಾಡಿದರು. ನಾನು ಆಗಲೇ intervene ಆಗಿ ಹೇಳಿದ್ದೆ. ಇದು Governor's address ಹೊರತು, it is the speech prepared by the cabinet. ಸಂಪುಟ ಅದಕ್ಕೆ ಪೂರ್ಣ ಜವಬ್ದಾರಿ ತೆಗೆದುಕೊಳ್ಳಬೇಕು. ಇವರದ್ದೇ ಜವಾಬ್ದಾರಿ. ಅವರದ್ದಲ್ಲ. Governor ಕೆಲವು observation ಗಳನ್ನು ಮಾಡಿದ್ದಾರೆ. ನಾನು ಅವುಗಳ detailsಗೆ ಹೋಗುವುದಿಲ್ಲ. ಈ ರಾಜ್ಯದ ಸಾರ್ವಜನಿಕ ಜೀವನದಲ್ಲಿ ನಾವು ಯಾರೂ ಹಿಂದೆ ನೋಡದಂತೆ ಇರುವ ಕೆಲವು ದುಃಖಕರ ಸಂಗತಿಗಳು ನಡೆದು

ಹೋದವು. ಯಾರದ್ದು ಸರಿ? ಯಾರದ್ದು ತಪ್ಪು? ಏಕೆ ಆಯಿತು? ಅವುಗಳ ವಿಶ್ಲೇಷಣೆಗೆ ನಾನು ಹೋಗುವುದಿಲ್ಲ. ಆದರೆ ಆ ಘಟನೆಗಳು ನಡೆದುದರ ಪರಿಣಾಮ ಸಾರ್ವಜನಿಕ ಜೀವನದ ಮೇಲೆ, ಸಾರ್ವಜನಿಕ ಬದಿಕಿನಲ್ಲಿರತಕ್ಕವರ ಎಲ್ಲರ ಮೇಲೆ ಒಂದು ರೀತಿಯ ಅನುಮಾನ ಬರುವ ಹಾಗೆ ಆಯಿತು. ನಾನು ಅಂಥವನಲ್ಲ, ನಾನು ಅಂಥವನಲ್ಲ ಎಂದು ನಾವು ಬೋರ್ಡ್ ಹಾಕಿಕೊಂಡು ಓಡಾಡಬೇಕಾದಂಥ ಪರಿಸ್ಥಿತಿ ಬಂತು. ನಮ್ಮ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂದರೆ ಯಾರು ಕಾನೂನಿನ ವ್ಯಾಪ್ತಿ ಒಳಗೆ ಬಂದು, ಕಸ್ಟಡಿಗೆ ಹೋಗಿಬಂದರೋ ಅವರು ಅಷ್ಟೇ ಜನರೇನಾ ಈ ರಾಜ್ಯದಲ್ಲಿ ಭ್ರಷ್ಟರು. ಅಥವಾ ಬೇರೆಯವರು ಇದ್ದಾರಾ? ನಾನು ಎಲ್ಲಾ ಪಾರ್ಟಿಗಳನ್ನು ಸೇರಿಸಿ ಹೇಳುತ್ತಿದ್ದೇನೆ. ಆದರೆ census ಲೆಕ್ಕಕ್ಕೆ ಸಿಕ್ಕಿದ್ದು ಈ ಮೂರ್ನಾಕು ಜನರು. ಭ್ರಷ್ಟಚಾರ ಎಂದರೆ ಏನು? ಊರಿನಲ್ಲಿ ಒಂದು ಚೀಟಿ ನಡೆಸುತ್ತಿದ್ದರೆ ಅಥವಾ ಒಂದು ದೇವಸ್ಥಾನದ, ಒಂದು ಸ್ಕೂಲ್‌ನ ಜವಬ್ದಾರಿ ಒಪ್ಪಿಕೊಂಡಿದ್ದರೆ ಹತ್ತು ಜನದ ಹಣ ಅಲ್ಲಿ ಇದ್ದಾಗ ಅದರ ಉಸ್ತುವಾರಿ ವಹಿಸಿಕೊಂಡವರು ಲೆಕ್ಕ ಸರಿಯಾಗಿ maintaion ಮಾಡದೆ ಹೋದರೆ ಅಥವಾ ಅದರಲ್ಲಿರತಕ್ಕ ಹಣವನ್ನು ನಮ್ಮ ಸ್ವಂತಕ್ಕೆ ತೆಗೆದುಕೊಂಡರೆ ನನ್ನ ಪ್ರಕಾರ misuse of authority, misuse of Office. Embezzlement ಬೇರೆ. ನೆಪೋಟಿಸಂ ಬೇರೆ. ಇವುಗಳನ್ನೇಲ್ಲಾ ನಾವು ಲೆಕ್ಕಕ್ಕೆ ತೆಗೆದುಕೊಂಡಾಗ ಸ್ವಜನ ಪಕ್ಷಪಾತ, ಸಾರ್ವಜನಿಕ ಹಣ ದುರುಪಯೋಗ. ನಮ್ಮಲ್ಲಿ ಇರತಕ್ಕಂಥ ವ್ಯವಸ್ಥೆಯಲ್ಲಿ ನಾವು ಸಾಕ್ಷ್ಯಧಾರವಿಲ್ಲದೆ ನೀನು ಭ್ರಷ್ಟವೆಂದು ಹೇಗೆ ಹೇಳುವುದು? ಎಲ್ಲೋ ಪ್ರತಾಪ್ ಸಿಂಗ್ ಖೈರಾನ್ ಒಬ್ಬರು, ನಮಗೆ ನೆನಪಿದ್ದಂತೆ ಮತ್ತೊಬ್ಬರು, ಅಲ್ಲಿ ಒಬ್ಬರು ಬಿಟ್ಟರೆ, ರಾಷ್ಟ್ರಕ್ಕೆ ಮಾಡಿದವರು ಯಾರು? ಶಿಕ್ಷೆಗೆ ಒಳಗಾದವರು ಯಾರು? ಇಲ್ಲೂ ಒಂದಷ್ಟು ಜನರು ರಾಜೀನಾಮೆ ಕೊಟ್ಟಿದ್ದಾರೆ. ಕಿತ್ತೂರ್, ಶ್ರೀ ದೇವೇಂದ್ರಪ್ಪ ಘಾಳಪ್ಪ ಶ್ರೀಮತಿ ರೇಣುಕಾ ರಾಜೇಂದ್ರನ್, ಇವರ ಮೇಲೆಲ್ಲಾ ಭಾರಿ ದೊಡ್ಡ ಅಪಾದನೆಗಳು! ಕಿತ್ತೂರ್ ಮನೆಗೆ ಯಾರೋ ಹೆಣ್ಣು ಮಗಳು ಹೋಗಿಬಂದಳಂತೆ, ಆ ಮಗಳು ಕಾಣಲಿಲ್ಲವಂತೆ ಅದಕ್ಕೋಸ್ಕರ ಕಿತ್ತೂರ್ ಅವರಿಗೆ ಚಲೇ ಜಾವ್ ಅಂತೆ ಶ್ರೀ ಘಾಳಪ್ಪ ಯಾರಾದೋ ಮನೆಗೆ ಹೋಗಿದ್ದರೆಂದು ಅವರನ್ನು ಕಳುಹಿಸಿಬಿಟ್ಟರು, ಶ್ರೀಮತಿ ರೇಣುಕಾ ರಾಜೇಂದ್ರನ್ ಅವರು ಯಾರಿಗೋ ಸಬ್‌ಇನ್ಸ್‌ಪೆಕ್ಟರ್ ಕೆಲಸ ಕೊಡಿಸುತ್ತೇವೆಂದು ಹಣ

ತೆಗೆದುಕೊಂಡಿದ್ದರಂತೆ! ಅಂದರೆ ಎಷ್ಟು effective ಆಗಿ ನಮ್ಮ ಭ್ರಷ್ಟಾಚಾರ ವಿರೋಧಿ ಸಮರ ಯಾವುದೇ ರೀತಿಯಲ್ಲಿ defence ಮಾಡಿಕೊಳ್ಳಲಿಕ್ಕೆ ಶಕ್ತಿ ಇಲ್ಲದವರ ಮೇಲೆ ಸಾಗುತ್ತದೆ ಎಂಬುದಕ್ಕೆ ಒಂದು ಉದಾಹರಣೆ ಹೇಳುತ್ತಿದ್ದೇನೆ. ಅದೇ ಬಲಾಢ್ಯರಿಗೆ, ಅವರಿಗೆ ತಿಳುವಳಿಕೆನೂ ಇದೆ, ಶಕ್ತಿನೂ ಇದೆ, ಶಕ್ತಿನೂ ಇದೆ., ಸಲಹೆ ಕೊಡುವವರು ಇದ್ದಾರೆ, ಲೆಕ್ಕ adjust ಮಾಡುವುದಕ್ಕೆ auditors ಇದ್ದಾರೆ, ಕೋರ್ಟ್‌ಗೆ ಹೋಗುವುದಕ್ಕೆ ವಕೀಲರು ಇದ್ದಾರೆ, ಸಾಲದ್ದಕ್ಕೆ ಸಮುದಾಯ ಹಿಂದೆ ಇದೆ. ನಮ್ಮ ಕಣ್ಣೆದಿರಿಗೆ ಬಹಿರಂಗವಾಗಿ ಸಂವಿಧಾನವನ್ನು ನಾವು ಹೇಗೆ ನಿಷ್ಕ್ರಿಯೆಗೊಳ್ಳುತ್ತೇವೆ ಎನ್ನುವುದಕ್ಕೆ ನಾನು ಈ ಮಾತನ್ನು ಪ್ರಾಸಂಗಿಕವಾಗಿ ಹೇಳಿದೆ ಅಷ್ಟೇ. KPSC ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ತನ್ನದೇ ಆದ ಧಾಟಿಯಲ್ಲಿ ಹೇಳಿದರು. ಮಾನ್ಯ ಕುಮಾರಸ್ವಾಮಿಯವರು ತಮ್ಮ ವಾದವನ್ನು ಮಂಡಿಸಿದರು. Discretion ಅಂದರೆ ವಿವೇಚನೆ. ವಿವೇಚನೆ ಉಪಯೋಗಿಸಬೇಕಾದವನು ವಿವೇಕಿ. ವಿವೇಕಿ ಅಲ್ಲದವನು ಅವಿವೇಕಿ. ಅವಿವೇಕಿಗಳಿಗೆ ನಿಮ್ಮ ವಿವೇಚನೆಯನ್ನು ಉಪಯೋಗಿಸಿ ನೀನು ನಡೆಯಬಹುದು ಅಂದಾಗ ಅದು ಅವನಿಗೆ ಮೈಗೂಡದೆ ಬರದೆ ಇರತಕ್ಕಂತಹ ಗುಣ. ಸಾಧ್ಯವೇ ಇಲ್ಲ. ವಿವೇಚನಾಯುತ ವ್ಯಕ್ತಿಗಳನ್ನು, ವಿವೇಚನೆಯಿಂದ ಕೂಡಿ ಕೆಲಸ ಮಾಡತಕ್ಕಂಥವರನ್ನು ಅಂಥಹ ಜವಾಬ್ದಾರಿ ಸ್ಥಾನಗಳಲ್ಲಿ ಕೂಡಿಸತಕ್ಕಂಥದ್ದರಲ್ಲಿ ಈ ವ್ಯವಸ್ಥೆ ಫೇಲಾಗಿದೆ. Obviously ಮುಖ್ಯಮಂತ್ರಿಗಳು ಇರುತ್ತಾರೆ, discretionary quota G-category ಯಲ್ಲಿ ಸೈಟ್ ಕೊಡಿ ಎಂದು ಹೇಳುತ್ತಾರೆ. ಎಲ್ಲಾ ಮುಖ್ಯಮಂತ್ರಿಗಳು ಎಲ್ಲಾ ಸೈಟ್‌ಗೆ ದುಡ್ಡು ತೆಗೆದುಕೊಂಡು ಮಾಡುವುದಕ್ಕೆ ಆಗುವುದಿಲ್ಲ. ನಮ್ಮಂತಹವರು ಹೋಗಿ ಕಾಡುತ್ತೇವೆ. ಏನಪ್ಪಾ ಇದು ಒಂದು ಮಾಡುವುದಕ್ಕೆ ಆಗುವುದಿಲ್ಲವೇ ಎಂದು ಕೇಳುತ್ತಾರೆ. ಹಾಳಾಗಿ ಹೋಗಲಿ ಎಂದೆ ಸೈನ್ ಹಾಕಿ ಕೊಡುತ್ತಾರೆ. ಯಾರೋ ಇನ್ನೊಬ್ಬನು ಅದನ್ನು ತೆಗೆದುಕೊಂಡು ಕೋರ್ಟ್‌ಗೆ ಗುಜರಾಯಿಸುತ್ತಾನೆ. ನನ್ನನ್ನು ಕೋರ್ಟ್‌ನಲ್ಲಿ ಕರೆಯುವುದಿಲ್ಲ. ಮುಖ್ಯ-ಮಂತ್ರಿಗಳು ಯಾರು ಸಹಿ ಹಾಕಿರುತ್ತಾರೆ ಅವರನ್ನು ಕೋರ್ಟ್‌ಗೆ ಕರೆಯುತ್ತಾರೆ. The beneficiary, he manages.ಅಂದರೆ ಎಲ್ಲೋ ಒಂದು ಕಡೆಗೆ ನಮಗೆ clarity ಇಲ್ಲ. ನಾವು ಇದರಲ್ಲಿ individuals ಅನ್ನು discuss

ಮಾಡಬಾರದು. Political system ಬಗ್ಗೆನೂ ಹೆಚ್ಚು ಮಾತನಾಡುವುದರಲ್ಲಿ ಅರ್ಥವಿಲ್ಲ. ನಾವು ಬುದ್ಧಿಪೂರ್ವಕವಾಗಿ ಸಂವಿಧಾನದ provisions ಏನಿದೆ ಅವುಗಳನ್ನು ಪರಿಣಾಮಕಾರಿಯಾಗಿ ಕೆಲಸ ಮಾಡದಂತೆ ನಿಯಂತ್ರಿಸುತ್ತಿದ್ದೇವೆ. ಅಲ್ಲಿ ನಾವು ಬಹಳ ಬಿದ್ಧಿವಂತಿಕೆಯಿಂದ ಕೆಲಸ ಮಾಡಿದ್ದೇವೆ. Governor–ರವರ address ನಲ್ಲಿ ಹಿಂದಿನ ಸರ್ಕಾರದ ಚಟುವಟಿಕೆಗಳ ಬಗ್ಗೆ, ಹೊಸ ಸರ್ಕಾರದ ನೀತಿಗಳ ಬಗ್ಗೆನೂ ಪ್ರಸ್ತಾಪ ಮಾಡಿದ್ದಾರೆ. ಎಲ್ಲಾ ಹೊಸ ನೀತಿಗಳ ಬಗ್ಗೆ ಒಂದೇ ಸಲ ಹೇಳಿಸುವುದಕ್ಕೆ ಆಗುವುದಿಲ್ಲ. ಮೇ 8ನೇ ತಾರೀಖು ಚುನಾವಣೆ ಫಲಿತಾಂಶ. ಜೂನ್ 3 Governor's–address. ಈ ಮಧ್ಯೆ ಮುಖ್ಯಮಂತ್ರಿಗಳ ಆಯ್ಕೆ ಅವರು ಸಂಪುಟವನ್ನು ಆಯ್ಕೆ ಮಾಡಿಕೊಂಡಿದ್ದು. A very little time, ಇದ್ದುದ್ದರಲ್ಲಿ ತಮ್ಮ ಪ್ರಮುಖ ಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ. Scheduled Caste ಬಗ್ಗೆ ಅವರು ಮಾತನಾಡಿದ್ದಾರೆ. ಬಹಳ clear ಆಗಿ ಏನೂ ಬಂದಿಲ್ಲ. Scheduled Caste & Scheduled Tribe ಅಭಿವೃದ್ಧಿಗಾಗಿ ಯಾವ ಹಣವನ್ನು ನಾವು target ಮಾಡುತ್ತೇವೆ, ಖರ್ಚು ಮಾಡುತ್ತೇವೆಂದು ಹೇಳಿ, ಯಾವ ಹಣ ಆ ಉದ್ದೇಶಕ್ಕಾಗಿ ಖರ್ಚಾಗದೇ ಹಾಗೇ ಉಳಿದು ಹೋಗುತ್ತದೆ. ಇದು ಘೋರ ಅಪರಾಧ. ನೀವು ಹಣವನ್ನು ನಿಗದಿ ಮಾಡಿ ಖರ್ಚು ಮಾಡದಿದ್ದಾಗ ಎರಡು ಅಭಿಪ್ರಾಯಗಳಿಗೆ / inferencesಗೆ ಮಾತ್ರ ನೀವು ಬರಬಹುದು. ಒಂದು, ಅವರೆಲ್ಲಾ ಅಭಿವೃದ್ಧಿಯಾಗಿ ಹೋಗಿಬಿಟ್ಟಿದ್ದಾರೆ, ಆ ವರ್ಗದ ಜನರಿಗೆ ಇನ್ನೇನೂ ಹಣವನ್ನು ಮೀಸಲಿಡಬೇಕಾಗಿಲ್ಲ, ಇದು ಬುದ್ಧಿ ಇಲ್ಲದೇ ಇಟ್ಟಿದ್ದು ಎನ್ನುವುದು ಅಥವಾ ಎಲ್ಲೋ ಒಂದು ಕಡೆಗೆ ನಾವು ಹಣ ಮೀಸಲಿಟ್ಟರೂ ಕೂಡಾ ಉದ್ದೇಶಪೂರ್ವಕವಾಗಿ ಅವರಿಗಾಗಿ ಅದನ್ನು ಖರ್ಚು ಮಾಡುವುದಕ್ಕೆ ನಾವು ಮನಸೋ ಇಚ್ಛೆ ತಯಾರಾಗಿಲ್ಲ ಎನ್ನುವುದು, ಇಚ್ಛಾ ಶಕ್ತಿ ಇಲ್ಲದಿರುವುದು ಎರಡನೇ ಅಂಶ ಸತ್ಯ. ಏಕೆಂದರೆ ಆ ವರ್ಗಗಳ ಜನರ ಸ್ಥಿತಿಗತಿಗಳನ್ನು ನಾವು ಕಾಣುತ್ತಿದ್ದೇವೆ. ಇದು ಯಾರೋ ಅವರಿಗೆ charityಗೆ, ಧರ್ಮಕ್ಕೆ ಕೊಡುತ್ತಿರುವುದಲ್ಲ. ಇದು ಅವರ entitlement – ಇದು ಆ ವರ್ಗದ ಜನರ ಹಕ್ಕು. ಅದಕ್ಕಾಗಿ ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಒಂದು ಹೊಸ ಶಾಸನವನ್ನೇ ಜಾರಿಗೆ ತಂದಿದ್ದಾರೆ. ಇಲ್ಲಿಯವರೆವಿಗೂ ಎಷ್ಟು ಹಣವನ್ನು

ಅವರಿಗಾಗಿ ನಮೂದು ಮಾಡಿದ್ದು, ಖರ್ಚಾಗದೇ ಹಾಗೆ ಉಳಿದು ಹೋಗಿದೆ, ಆ ಎಲ್ಲಾ ಹಣವನ್ನು ಒಟ್ಟು ಮಾಡಿ ಇಂತಿಷ್ಟು ದಿವಸಗಳೊಳಗಾಗಿ ಆ ವರ್ಗದ ಜನರ ಅಭಿವೃದ್ಧಿಗಾಗಿ ಖರ್ಚು ಮಾಡಲೇಬೇಕು. ಅದನ್ನು ಮಾಡದೆ ಹೋದರೆ, ಆ ಹೊಣೆಗಾರಿಕೆ ಹೊತ್ತಂಥ ಅಧಿಕಾರಿಗಳಿಗೆ ಶಿಕ್ಷೆ ಆಗುತ್ತದೆ. ಬಹುಶಃ ಪರಿಶಿಷ್ಟ ಜಾತಿ/ ಜನಾಂಗದ ವಿಚಾರವನ್ನು ನಾವು ಮಾತನಾಡುವಾಗ ಕಾಲ ಕಾಲಕ್ಕೆ ಆಯಾ ಸರ್ಕಾರಗಳು, ನಾಯಕರುಗಳು ಅನೇಕ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದಾರೆ. ಬಹುಶಃ ಇಂಥ ಒಂದು ನಿರ್ಣಯವನ್ನು ಮೊದಲು ಯಾರೂ ಮಾಡಿರಲಿಲ್ಲ. ನನ್ನ ಪ್ರಕಾರ ಈ ಸರ್ಕಾರ ಏನು ಈ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ, ರಾಜ್ಯಪಾಲರ ಬಾಯಿಯಲ್ಲಿ ಆ ಮಾತನ್ನು ಹೇಳಿಸಿದ್ದಾರೆ, ಇದನ್ನು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿಯೂ ಸಹ ಪ್ರಧಾನವಾಗಿ ಪ್ರಸ್ತಾಪ ಮಾಡಲಾಗಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಕಾನೂನು ಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತೇನೆ, ಸಮಯವನ್ನು ಕಳೆದುಕೊಳ್ಳಲಾರದೇ ಅತ್ಯಂತ ತ್ವರಿತಗತಿಯಲ್ಲಿ ಬಿಲ್‌ನ್ನು—ಮಾಡಿ, ಮುಂಬರುವ ಬಜೆಟ್ ಸೆಷನ್‌ನಲ್ಲಿ ನಿವು ಅದನ್ನು ಪಾಸು ಮಾಡಿಸಿಕೊಳ್ಳಿ. ಅನೇಕ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಸಾಮಾಜಿಕ ಬದುಕಿಗೆ, ಶಿಕ್ಷಣ ಕ್ಷೇತ್ರದಲ್ಲಿ ಅಥವಾ ಅವರ ಉದ್ಯೋಗ ಮತ್ತೊಂದು ವಿಚಾರದಲ್ಲಿ ಎಲ್ಲಾ ಕಡೆಗೂ ಪ್ರಯೋಜನವಾಗುತ್ತದೆ. ಮಾನ್ಯ ಮುಖ್ಯಂತ್ರಿಗಳ ದೂರದರ್ಶಿತ್ವದಲ್ಲಿ ಈ ಒಂದು ನಿರ್ಣಯ ತೆಗೆದುಕೊಂಡಿರುವುದಕ್ಕಾಗಿ ಅವರನ್ನು ಶ್ಲಾಘನೆ ಮಾಡುತ್ತಿದ್ದೇನೆ. ನಾನು ಮಾತನ್ನು ಮುಂದುವರೆಸಲೇ? ಅಥವಾ ಊಟವಾದ ನಂತರ ಮುಂದುವರೆಸಲೇ? ತಮ್ಮನ್ನು ನೋಡಿದರೆ ಸ್ವಲ್ಪ ಆ ಕಡೆ ಈ ಕಡೆ ವಾಲುತ್ತಿದ್ದೀರಿ. ಹಸಿವು ಜಾಸ್ತಿಯಾಯಿತೇನೋ ಅನ್ನಿಸುತ್ತಿದೆ. ನೀವು ಹೇಗೆ ಹೇಳುತ್ತಿರೋ ಹಾಗೆ.

ಅಧ್ಯಕ್ಷರು : ಈಗ ಒಂದು topic ಚರ್ಚೆ ಪೂರೈಸಿ, ಮುಂದಿನ topicಗೆ ಹೋಗುವುದಕ್ಕಿಂತ ಮುಂಚೆ adjournಮಾಡೋಣ . .

ಶ್ರೀ ಕೆ.ಆರ್. ರಮೇಶ್ ಕುಮಾರ್ : ಈಗ ಇದನ್ನು ಇಲ್ಲಿಗೆ ಮುಗಿಸಿದೆ.

ಅಧ್ಯಕ್ಷರು : ಮುಗಿಸಿ, ಪುನಃ ಎರಡೂವರೆ ಗಂಟೆಗೆ . . . .

ಶ್ರೀ ಕೆ.ಆರ್. **ರಮೇಶ್ ಕುಮಾರ್** : ನಾನು ಬಹಳ ಹೊತ್ತನ್ನೇನು ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು : ಬಹಳ ಸ್ವಾರಸ್ಯಕರವಾಗಿ ಮುಂದುವರೆಸಿ. ಮಾತನಾಡಿ. . .

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾತನಾಡೋಣ, ಸ್ವಲ್ಪ ಊಟದ ಸಮಯವನ್ನು ಮುಂದಕ್ಕೆ ಹಾಕಿ ಬಿಟ್ಟರೆ, ಶ್ರೀ ಕುಮಾರಸ್ವಾಮಿಯವರು ಊಟ ಮಾಡೋಣವೆಂದು ನನಗೆ ಎರಡು ಬಾರಿ ಸನ್ನೆ ಮಾಡಿದರು. ನಾವು ನಮ್ಮ ಪಕ್ಷದ ನಾಯಕರನ್ನು ಹೆಚ್ಚು ಕೇರ್ ಮಾಡದೇ ಇದ್ದರೂ ಸಹ ಪ್ರತಿಪಕ್ಷದ ನಾಯಕರ ಕಡೆಗೆ ನಮ್ಮ ಹೆಚ್ಚು ಗಮನ ಇರಬೇಕಾಗುತ್ತದೆ. I think we will meet after lunch.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಪನಃ 2.30 ಗಂಟೆಗೆ ಸೇರುವುದು.

(ಸದನವು ಪುನಃ ಅಪರಾಹ್ನ 2.30 ಗಂಟೆಗೆ ಸಮಾವೇಶಗೊಳ್ಳುವಂತೆ 1.45 ಕ್ಕೆ ಮುಂದೂಡಲ್ಪಟ್ಟಿತು)

(ಸದನವು ಪುನಃ ಮಧ್ಯಾಹ್ನ 2.50 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಗೋವಿಂದಪ್ಪ ಎಂ ಕಾರಜೋಳ್ :– ಸನ್ಮಾನ್ಯ ಅಧ್ಯಕ್ಷರೆ, ನಾವು ಪದೇ ಪದೇ ದಿನ ಅದನ್ನೇ ಹೇಳುತ್ತೇವೆ, ರೂಲಿಂಗ್ ಪಾರ್ಟಿ ಕಡೆ ಯಾರೂ ಬರುವುದೇ ಇಲ್ಲ. ಸುಮ್ಮನೆ ಏಕೆ ಈ ಸದನವನ್ನು ನಡೆಸುತ್ತೀರಿ? ದಯವಿಟ್ಟು ಸದನವನ್ನು ಮುಂದಕ್ಕೆ ಹಾಕಿ. ಪ್ರತಿನಿತ್ಯ ಇದೇ ಆಗಿದೆ. ಅವರಿಗೆ interest ಇರಲಿಲ್ಲವೆಂದರೆ ಸದನವನ್ನು ಮುಂದಕ್ಕೆ ಹಾಕಿ.

(ಗೊಂದಲ)

ಅಧ್ಯಕ್ಷರು :OK, ಖಂಡಿತ, ತಮ್ಮ ಸಲಹೆ ಒಳ್ಳೆಯದು.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ :– ಮಾನ್ಯ ರಮೇಶ್ ಕುಮಾರ್‌ರವರ ಭಾಷಣ ಕೇಳಲಿಕ್ಕೂ ಬರುವುದಿಲ್ಲವೆಂದರೆ ಹೇಗೇ

(ಗೊಂದಲ)

ಅಧ್ಯಕ್ಷರು :– ನೀವು ಹೇಳಿದ ಮಾತು ನಿಜ.

(ಗೊಂದಲ)

ಶ್ರೀ ಗೋವಿಂದಪ್ಪ ಎಂ ಕಾರಜೋಳ್ :- ನಮ್ಮ ಅವಧಿಯಲ್ಲಿ ಕೊನೆಯ ದಿವಸಗಳಲ್ಲೂ ಹೀಗೆ ಆಗಿರಲಿಲ್ಲ. ಈಗ ಮೊದಲನೇ ಅಧಿವೇಶನದಲ್ಲೇ ಈ ಪರಿಸ್ಥಿತಿ ಆದರೆ ಹೇಗೆ?

(ಗೊಂದಲ)

ಅಧ್ಯಕ್ಷರು :- ಮಾನ್ಯ ಕಾನೂನು ಸಚಿವರೇ, ದಯವಿಟ್ಟು ಪ್ರಸ್ತಾವವನ್ನು ಮಂಡಿಸಿ.

7. **ಪ್ರಸ್ತಾವ**

ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು) :- ಮಾನ್ಯ ಅಧ್ಯಕ್ಷರೆ, ಈಗಾಗಲೇ ದಿನಾಂಕ 04.06.2013ರಂದು ವಿಧಾನ ಸಭೆ ಸಮಿತಿಗಳನ್ನು ರಚಿಸಲು ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮಗಳ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ವಿಧಾನ ಸಭೆಯ ವಿವಿಧ ಸಮಿತಿಗಳಿಗೆ ಮಾನ್ಯ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಮಾನ್ಯ ಕಾನೂನು ಸಚಿವರು ಮಂಡಿಸಿರುವ ಪ್ರಸ್ತಾವಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸುತ್ತೇನೆ.

(ಪ್ರಸ್ತಾವವನ್ನು ಸದನವು ಅಂಗೀಕರಿಸಿತು ಮತ್ತು ವಿಧಾನಸಭೆಯ ವಿವಿಧ ಸಮಿತಿಗಳಿಗೆ ಮಾನ್ಯ ಸದಸ್ಯರನ್ನು

ನಾಮ ನಿರ್ದೇಶನ ಮಾಡಲು ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಿತು)

ಅಧ್ಯಕ್ಷರು :- ಈಗ ಮಾನ್ಯ ರಮೇಶ್ ಕುಮಾರ್‌ರವರು ತಮ್ಮ ಭಾಷಣವನ್ನು ಮುಂದುವರೆಸಬೇಕು.

ಶ್ರೀ ಡಿ.ಎನ್.ಜೀವರಾಜ್ :- ಸರ್, ನನಗಂತೂ ಬಹಳ ಪಾಪ ಎನಿಸುತ್ತಿದೆ!

ಅಧ್ಯಕ್ಷರು :- ಯಾಕ್ರೀ?